ಇರುಳಿಡೀ ನಿದ್ದೆಯಿಲ್ಲದೆ ಹೊರಳಾಡಿ ಮುಂಜಾನೆಗೇ ಹೊರಡಲು ಅನುವಾಗುತ್ತಿದ್ದ ಚಿಕ್ಕಸವನಿಗೆ ಇದ್ದಕ್ಕಿದ್ದಂತೆ ತೋಟವನ್ನೊಮ್ಮೆ ನೋಡಬೇಕೆನಿಸಿತು. ಕೆಲ ವರ್ಷಗಳ ಹಿಂದೆ ತೋಟವಾಗಿದ್ದ ತಾವಿನಲ್ಲೀಗ ಕಾಲುವೆಯಿತ್ತು. ಅದು ಕಾಟ್ಮಾರಯ್ಯನಿಗೆ ಪಿತ್ರಾರ್ಜಿತವಾಗಿ ಬಂದದ್ದಾಗಿತ್ತು. ಊರಿನಿಂದ ಮೈಲಿ ಪಾಸಲೆಯಲ್ಲಿದ್ದ ಅದರಲ್ಲಿ ಹತ್ತಿರತ್ತಿರ ನೂರು ತೆಂಗಿನ ಮರಗಳಿದ್ದವು. ಮಿಕ್ಕದ್ದು ಬೆದ್ದಾಗಿತ್ತು. ಭಂಗ ಬಡತನದಲಿ ಸಂಸಾರ ತೂಗಿಸಲು ಸಾಕಾಗಿತ್ತು. ಮತ್ತೊಂದಷ್ಟು ನಿಗಾ ಮಾಡಿದ್ರೆ ಮತ್ತೊಂದಷ್ಟು ಆದಾಯ ಹೆಚ್ಚಬಹುದೆಂಬ ಕಾರಣಕ್ಕೆ ಕಾಟ್ಮಾರಯ್ಯ ಅಲ್ಲಿಗೊಂದು ಬೋರ್ವೆಲ್ ಕೊರೆಸುವ ಮನಸ್ಸು ಮಾಡಿದ್ದ. ಅದಕ್ಕಾಗಿ ಒಂದಷ್ಟು ಕಾಸನ್ನೂ ಕೂಡಿಸಿಕೊಂಡಿದ್ದ. ಸಾಲದೇ ಬಂದರೆ ಇರಲಿ ಅಂತ ಅವರಿವರ ಬಳಿ ಕೈಗಡಕ್ಕೂ ಹೇಳಿಕೊಂಡಿದ್ದ. ನೀರು ಬಿದ್ದರೆ ತರಕಾರಿಯನ್ನೋ, ಬತ್ತವನ್ನೋ ಬೆಳೆದು ಕೊಟ್ಟೋರ ಋಣ ತೀರಿಸಬಹುದು ಅನ್ನುವ ಅಂದಾಜಿನಲ್ಲಿದ್ದ.

ಕಾಟ್ಮಾರಯ್ಯ ಹೀಗೊಂದು ಕನಸು ಕಾಣುತ್ತಿರುವಂಥಾ ಹೊತ್ತಲ್ಲಿ, ಕಂಬ್ದಳ್ಳಿಗೆ ಕಾಲುವೆಯೊಂದು ಬರಲಿರುವ ಸುದ್ದಿ ಇಡೀ ಹಳ್ಳಿಯನ್ನು ಪುಳಕಗೊಳಿಸಿತ್ತು. ಅದು ತನ್ನ ಜಮೀನಿನ ಪಕ್ಕದಲ್ಲೇ ಹೋಗುತ್ತಂತೆ, ಅನ್ನೋ ಗಾಳಿ ಸುದ್ದಿಯೊಂದು ಕಾಟ್ಮಾರಯ್ಯನನ್ನು ತುದಿಗಾಲಲ್ಲಿ ನಿಲ್ಲಿಸಿತ್ತು. ಆದರೆ ಅದೆಲ್ಲಾ ತಳ್ಕಂಪಳ್ಕಾ ಆಗುವಂತೆ ಅವನ ಜಮೀನೊಳಗೇ ಕಾಲುವೆ ಹೋಗಿ, ಇದ್ದಬದ್ದದ್ದನ್ನೆಲ್ಲಾ ಅದೇ ನುಂಗಾಕಿಕೊಳ್ಳುತ್ತೆ ಅನ್ನೋದು ಗೊತ್ತಾಗುತ್ತಿದ್ದಂತೆ ದಿಕ್ಕೆಟ್ಟಿದ್ದ ಕಾಟ್ಮಾರಯ್ಯ,ಅದನ್ನು ಅಲ್ಲಿಂದ ತಪ್ಪಿಸಿ ವಾರಾಸಿಗೆ ಹೋಗುವಂತೆ ಮಾಡಲೋಸುಗ, ಶಾಸಕರಿಂದಿಡಿದು ಕಂಡಕಂಡವರನ್ನೆಲ್ಲಾ ಕಾಲುಕಟ್ಟಿದ್ದ. ಆದರದರಿಂದ ಮೂರುಕಾಸಿನದೇನೂ ಆಗಲಿಲ್ಲ. ಕೆಲವೇ ದಿನಗಳಲ್ಲಿ ಜಮೀನು ಕಳಕಂಡವರಿಗೆ ಸರ್ಕಾರ ಪರಿಹಾರ ಘೋಷಿಸಿ, ಫಲಾನುಭಾವಿಗಳು ತತಕ್ಷಣವೇ ತಂತಮ್ಮ ಜಮೀನಿನ ದಾಖಲೆಗಳನ್ನು ಒದಗಿಸಬೇಕೆಂಬ ಹುಕುಂ ಹೊರಡಿಸಿತು. ಜಮೀನಂತೂ ಪೋಯಾ, ಪರಿಹಾರವಾದರೂ ಸಿಗಲಿ ಅಂದುಕೊಂಡು ದಾಖಲೆಗಳಿಗಾಗಿ ತಾಲ್ಲೂಕು ಕಚೇರಿ ಎಡತಾಕಿದ್ದ ಕಾಟ್ಮಾರಯ್ಯ. ಆಗ ಮತ್ತೊಂದು ಆಘಾತ ಅವನಿಗಾಗಿ ಕಾದಿತ್ತು. ದಾಖಲೆಗಳ ಪ್ರಕಾರ ಅಲ್ಲಿ ಕಾಟ್ಮಾರಯ್ಯನ ಜಮೀನೇ ಇರಲಿಲ್ಲ. ಕಾಟ್ಮಾರಯ್ಯನ ಕಾಟ ಜಾಸ್ತಿಯಾದಾಗ, 'ಅಲ್ಲಪ್ಪ ಇದೆಲ್ಲಾ ಕೆರೆ ಅಂಗಳ. ಅಂಥಾದ್ರಾಗೆ ನಿಂದೆಂಗಾಗುತ್ತೆ ಹೇಳು, ನೀನಲ್ಲಿ ತೋಟ ಮಾಡ್ಕಂಡಿದ್ದೇ ತಪ್ಪು. ಪರಿಹಾರ ಬೇರೆ ಕೇಳ್ತಿದೀಯಲ್ಲ. ಹಿಂಗೇ ಹಟ ಮಾಡಿದ್ರೆ ಇಷ್ಟು ದಿನ ಅನುಭವಿಸಿ ತಗಂಡಿರೋ ಆದಾಯನೆಲ್ಲಾ ಕಟ್ಟಬೇಕಾಗುತ್ತೆ' ಎಂಬ ಅಧಿಕಾರಿಗಳ ಮಾತಿಗೆ, 'ಇದು ನಮ್ ತಾತ, ಮುತ್ತಾತಂದಿರ ಕಾಲ್ದಿಂದ ಬಂದಿರೋ ಪಿತ್ರಾರ್ಜಿತ ಆಸ್ತಿ. ಆವಾಗ್ಲಿಂದ್ಲೂ ಇದ್ಕೆ ಕಂದಾಯ ಕಟ್ಕಂಡು ಬಂದಿದೀವಿ ಇಗೋ ನೋಡಿ ರಸೀದಿಗಳ್ನ' ಅಂತ ರುತಾ ಅಂಗಲಾಚಿದ್ದ.

ಸತ್ಯ ಏನೂಂದ್ರೆ, ಕಾಟ್ಮಾರಯ್ಯನ ತಾತ ಮುತ್ತಾತಂದಿರ ಕಾಲದಲ್ಲಿ ಅಲ್ಲೊಂದು ಚಿಕ್ಕ ಕೆರೆಯಿತ್ತು. ಅದು ಕ್ರಮೇಣ ಹೂಳಿನಿಂದ ಹೂತೋಗಿತ್ತು. ಮಳೆ ಕಡಿಮೆಯಾಗಿ ಯಾವಾಗ ಹಳ್ಳಕೊಳ್ಳಗಳು ಉಸಿರು ನಿಲ್ಲಿಸಿದವೋ, ಊರವರ ಒತ್ತುವರಿಯಿಂದಾಗಿ ಕೆರೆಯಂಥ ಕೆರೆಯೇ ಮಂಗಮಾಯವಾಗಿ, ಅಲ್ಲಿ ಹೊಲ, ತೋಟಗಳಾಗತೊಡಗಿದ್ದವು. ಹಂಗಿರುವಾಗ ಕಂಬ್ದಳ್ಳಿಗೆ ಮನೆವಾಳತನಕ್ಕೆಂದು ಬಂದಿದ್ದ, ಅಂಗೈಯಗಲ ನೆಲವಿಲ್ಲದಿದ್ದ, ಕಾಟ್ಮಾರಯ್ಯನ ಮುತ್ತಜ್ಜ ಸಿಂಗಾರಯ್ಯನೂ ತೂಬಿನ ಪಕ್ಕದ ಅಂಗಳದಲ್ಲಿ ಮೂರು ಎಕರೆಯನ್ನು ಹಿಡಿದುಕೊಂಡು, ಎಲ್ಲರಂತೆ ಹೆಂಗೋ ಅದನ್ನು ತನ್ನೆಸರಿಗೆ ಮಾಡಿಸಿಕೊಂಡಿದ್ದ. ಆವಾಗಿಂದಲೂ ಯಾರೂ ಕ್ಯಾರೆ ಕೆತ್ತ ಅನ್ನುವಂಥ ಪರಿಸ್ಥಿತಿಯೇ ಬಂದಿರಲಿಲ್ಲ. ಚಿಕ್ಕೆರೆಯನ್ನು ಒತ್ತಲಿಸಿಕೊಂಡಿದ್ದವರಲ್ಲಿ ಕಾಟ್ಮಾರಯ್ಯನನ್ನು ಬಿಟ್ಟರೆ ಉಳಿದವರಿಗೆ ಬೇರೆಡೆ ಅಷ್ಟೋ ಇಷ್ಟೋ ಜಮೀನಿತ್ತು. ಹಂಗಾಗಿ ಅವರೆಲ್ಲಾ ಬಚಾವಾಗಿದ್ದರು. ಕಾಟ್ಮಾರಯ್ಯ ಬೀದಿಗೆ ಬಿದ್ದಿದ್ದ.

ಒತ್ತುವರಿದಾರರನ್ನು ಬಿಟ್ಟು ಮಿಕ್ಕವರಿಗೆಲ್ಲಾ ಪರಿಹಾರ ಕೊಟ್ಟ ಕೂಡಲೇ ಕೆಲಸವೂ ಶುರುವಾಗಿ